

ತನ್ನ ಉಡಾವಣಾ ವಾಹನದ ಮಧ್ಯದಲ್ಲಿ ಕುಳಿತ 'ವರ್ಜಿನ್ ಗ್ಯಾಲಕ್ಟಿಕ್'ನ ಸ್ಪೇಸ್ ಶಿಪ್ 2 ನೌಕೆ.
ಚಿತ್ರಕೃಪೆ: ವರ್ಜಿನ್ ಗ್ಯಾಲಕ್ಟಿಕ್.




ಭೂಕಕ್ಷೆಯಲ್ಲಿ ಕ್ರ್ಯೂ ಡ್ರ್ಯಾಗನ್ ನೌಕೆ, ಕಲಾವಿದನ ಕಲ್ಪನೆಯಲ್ಲಿ ಚಿತ್ರ ಕೃಪೆ ನಾಸಾ

ಅಂತರಿಕ್ಷಯಾನಕ್ಕೆ ತಗಲುವ ಖರ್ಚನ್ನು ಗಮನಾರ್ಹವಾಗಿ ಕಡಿಮೆಮಾಡಲು ಪಣತೊಟ್ಟು 'ಅಂತರಿಕ್ಷ ಪ್ರವಾಸ'ವನ್ನು ಸಾಧ್ಯಮಾಡುವ ಮರು ಉಪಯೋಗಿ ವಾಹನಗಳನ್ನು ರೂಪಿಸುತ್ತಿದ್ದಾರೆ. ಆ ಪೈಕಿ ವರ್ಜಿನ್ ಗ್ಯಾಲಕ್ಟಿಕ್‌ನ 'ಸ್ಪೇಸ್ ಶಿಪ್ 2' ನೌಕೆ ಅಂತರಿಕ್ಷವನ್ನು ಮುಟ್ಟಿ ಬರುವ ಮೂಲಕ ತನ್ನ ಪ್ರಯಾಣಿಕರಿಗೆ 'ತೂಕರಹಿತ ಸ್ಥಿತಿ'ಯ ವಿಶಿಷ್ಟ ಅನುಭವವನ್ನು ಅಲ್ಪಕಾಲ ನೀಡುವ ಸಾಮರ್ಥ್ಯವನ್ನು ಹೊಂದಿದೆ. ಅದೇ ರೀತಿ ಜೆಫ್ ಬೆಝೋಸ್ ಅಭಿವೃದ್ಧಿಪಡಿಸುತ್ತಿರುವ 'ನ್ಯೂ ಷಪರ್ಡ್' ನೌಕೆಯೂ ಅಂತರಿಕ್ಷವನ್ನು ಮುಟ್ಟಿಬರುವ ಹಾಗೂ ಭೂಕಕ್ಷೆಗೆ ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯವನ್ನು ಹೊಂದಿರುತ್ತದೆ.

ಆದರೆ ಸ್ಪೇಸ್ ಎಕ್ಸ್‌ನ 'ಕ್ರ್ಯೂ ಡ್ರ್ಯಾಗನ್' ಅನ್ನು ಪ್ರಯಾಣಿಕರನ್ನು ಭೂಕಕ್ಷೆಗೆ ಕೊಂಡೊಯ್ಯುವಂತೆ ರೂಪಿಸಲಾಗಿದೆ. ಈಗಾಗಲೇ ಅಮೆರಿಕದ ಅಂತರಿಕ್ಷ ಸಂಸ್ಥೆ 'ನಾಸಾ'ದ ಗಗನಯಾತ್ರಿಗಳು ಅದರಲ್ಲಿ ಅಂತರಿಕ್ಷಯಾನ ಮಾಡಿ ಬಂದಿದ್ದು, 2022ರಿಂದ 'ಖಾಸಗಿ ಗಗನಯಾತ್ರಿ'ಗಳಿಗೆ ಆ ನೌಕೆಯಲ್ಲಿ ಕಕ್ಷೆಗೆ ತೆರಳಲು ಅವಕಾಶ ಮಾಡಿಕೊಡಲಾಗುವುದು ಎಂದು ಆ ಸಂಸ್ಥೆ ಪ್ರಕಟಿಸಿತ್ತು.

ಸದ್ಯಕ್ಕಂತೂ ಅಂತರಿಕ್ಷಯಾನ ದುಬಾರಿಯಾದ ಸಾಹಸವೇ ಆಗಿದ್ದು, ಶ್ರೀಸಾಮಾನ್ಯನ ಕೈಗೆ ಮುಂಬರುವ ಕೆಲವೇ ವರ್ಷಗಳಲ್ಲಿ ಎಟಕುವಂತೆ ಕಾಣುವುದಿಲ್ಲ.

ಚಂದ್ರಯಾನ ಮಾನವನಿಗೆ ಸಾಧ್ಯವಾದ ನಂತರ ಆಶಾವಾದದಿಂದ ತುಂಬಿತುಳುಕುತ್ತಿದ್ದ ಜಗತ್ತು ಮುಂದಿನ ಒಂದೆರಡು ದಶಕಗಳಲ್ಲೇ ಚಂದ್ರನ ಮೇಲೆ ಅಂಟಾರ್ಟಿಕಾದಲ್ಲಿ ಇರುವಂತಹ ಒಂದು ಕಾಯಂ ನೆಲೆಯೊಂದಿಗೆ ಮಂಗಳಗ್ರಹಯಾನವೂ ಸಾಧ್ಯವಾಗಬಹುದೆಂಬ ಬಗ್ಗೆ ಭರವಸೆಯನ್ನು ಹೊಂದಿತ್ತು. ಆದರೆ ಶೀತಲಸಮರದ 'ಚಂದ್ರ ಸ್ಪರ್ಧೆ'ಯಲ್ಲಿ ರಷ್ಯಾವನ್ನು ಸೋಲಿಸಿದ ಬಳಿಕ ಅಮೆರಿಕದಲ್ಲೇ ಚಂದ್ರನ ಬಗ್ಗೆ ಆಸಕ್ತಿ ಕಡಿಮೆಯಾಗಿ ಮೂರು ಅಪಾಲೋ ನೌಕೆಗಳೇ ರದ್ದಾದವು. ಇನ್ನು ಚಂದ್ರನ ಮೇಲಿನ ಕಾಯಂ ನೆಲೆಗಾಗಲೀ ಮಂಗಳಗ್ರಹಯಾನಕ್ಕಾಗಲೀ ಬೇಕಾದ ಸಂಪನ್ಮೂಲಗಳನ್ನು ಹೊಂಚುವುದಾದರೂ ಎಲ್ಲಿಂದ?

ತಂತ್ರಜ್ಞಾನವು ಮುಂದೊಡ್ಡುವ ಸವಾಲಿನೊಂದಿಗೇ ಸಂಪನ್ಮೂಲಗಳ ಕೊರತೆಯ ಸವಾಲನ್ನೂ ಇಂದು ಚಂದ್ರನೆಲೆಯ ಸ್ಥಾಪನೆಯಲ್ಲಿ ಹಾಗೂ ಮಂಗಳಗ್ರಹಯಾನವನ್ನು ಕೈಗೊಳ್ಳುವ ಸಂಬಂಧದಲ್ಲಿ ಜಗತ್ತು ಎದುರಿಸುತ್ತಿದೆ. ಮುಂದಿನ ಒಂದು ದಶಕದೊಳಗೆ ಅಮೆರಿಕದ 'ಆರ್ಟೆಮಿಸ್' ಕಾರ್ಯಕ್ರಮದ ಮೂಲಕ ಸಾಧ್ಯವಾಗಬಹುದಾದ ಚಂದ್ರನೆಲೆಯ ಸ್ಥಾಪನೆಯಲ್ಲೇನೋ ಯೂರೋಪ್ ಅಮೆರಿಕದೊಂದಿಗೆ ಕೈಜೋಡಿಸಿದೆ.

ಬಾಹ್ಯಾಕಾಶ ಸಾಹಸದಲ್ಲಿ ಮಂಗಳಗ್ರಹ ಮಾನವನ ಮುಂದಿನ ಗುರಿಯೆಂಬುದೇನೋ ನಿಜ. ಆದರೆ ಆ ಗುರಿಯನ್ನು ತಲುಪುವುದು ಯಾವಾಗ ಎಂಬುದನ್ನು ಈಗಲೇ ಹೇಳುವುದು ಕಷ್ಟ. ಅಮೆರಿಕ ಹಾಗೂ ಚೀನಾಗಳ ನಡುವೆ ಏರ್ಪಟ್ಟಿರುವ ಇಂದಿನ 'ಹೊಸ ಅಂತರಿಕ್ಷ ಸ್ಪರ್ಧೆ'ಯಿಂದಾಗಿ ಅದು ಈ ಶತಮಾನದ ಮಧ್ಯಭಾಗದ ಹೊತ್ತಿಗೆ ಸಾಧ್ಯವಾದರೂ ಆಗಬಹುದೇನೋ?

ಅಂತರಿಕ್ಷಕ್ಕೆ ತೆರಳಲು 1961ರಲ್ಲಿ ಯಶಸ್ವಿಯಾದ ಮಾನವ, ಕಳೆದ ಆರು ದಶಕಗಳಲ್ಲಿ ಗಮನಾರ್ಹವಾದ ಅನೇಕ ಬಾಹ್ಯಾಕಾಶಯಾನದ ಸಾಧನೆಗಳನ್ನು ಮಾಡಿದ್ದಾನೆ. ಅವು ಮುಂದಿನ ಅವನ ಹೆಜ್ಜೆಗಳಿಗೆ ಪೂರಕವಾಗಿವೆ. ಆದರೆ ಇಂದಿನ ಜಗತ್ತು ಕೊರೊನಾ ಸೇರಿದಂತೆ ಎದುರಿಸುತ್ತಿರುವ ಅನೇಕ ಸವಾಲುಗಳಿಂದಾಗಿ ಚಂದ್ರನ ಮೇಲೆ ಕಾಯಂ ಆಗಿ ನೆಲೆಸುವ ಹಾಗೂ ಮಂಗಳಗ್ರಹ ಯಾನವನ್ನು ಕೈಗೊಳ್ಳುವ ಬಗ್ಗೆ ಹೆಚ್ಚು ಗಮನಹರಿಸಲು ಮಾನವನಿಗೆ ಸಾಧ್ಯವಾದಂತಾಗಿದೆ.

ಸಮಸ್ಯೆಗಳು ಸಾಲುಗಟ್ಟಿದ್ದರೂ ಹುಟ್ಟಿನಿಂದಲೇ ಅನ್ವೇಷಣಾ ಮನೋಭಾವವನ್ನು ರೂಢಿಸಿಕೊಂಡಿರುವ ಮಾನವ ಅಂತರಿಕ್ಷದಲ್ಲಿ ಹೊಸ ಹೊಸ ಸಾಹಸಗಳನ್ನು ಕೈಗೊಳ್ಳುವುದನ್ನು, ಹೊಸ ಹೊಸ ಲೋಕಗಳ ಅನ್ವೇಷಣೆಯನ್ನು ಮರೆತಿದ್ದಾನೆಂದು ಹೇಳಲಾಗದು. ಕುವೆಂಪು ಅವರ 'ಓ ನನ್ನ ಚೇತನ, ಆಗು ನೀ ಅನಿಕೇತನ' ಎನ್ನುವ ಸಾಲು, ಮಾನವನ ಅನ್ವೇಷಣಾ ತುಡಿತವನ್ನೂ ಸೂಕ್ಷ್ಮವಾಗಿ ಸೂಚಿಸುತ್ತದೆ ಎನ್ನಬಹುದು.

ಪ್ರತಿಕ್ರಿಯಿಸಿ: feedback@sudha.co.in



ಕಲಾವಿದನ ಕಲ್ಪನೆಯಲ್ಲಿ ಚಂದ್ರ ಕಕ್ಷೆಯಲ್ಲಿ ಆರ್ಟೆಮಿಸ್ ಕಾರ್ಯಕ್ರಮದ ಚಟುವಟಿಕೆಗಳು.
ಚಿತ್ರಕೃಪೆ: 'ನಾಸಾ'